RNU AIR DHARWAD

# JUNE 20, 2024

## AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದಲ್ಲಿ ಹೊಸದಾಗಿ, 20 ವಸತಿ ಶಾಲೆಗಳ ಸ್ಥಾಪನೆಗೆ ಅನುಮತಿ – ಮುಖ್ಯಮಂತ್ರಿ ಸಿದ್ಧರಾಮಯ್ಯ.**
- **ತುಮಕೂರು, ಶಿವಮೊಗ್ಗ, ಕಾರವಾರ ಹಾಗೂ ಮಂಡ್ಯದಲ್ಲಿ, ಕಿದ್ವಾಯಿ ಮಾದರಿ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆ – ಶರಣಪ್ರಕಾಶ್ ಪಾಟೀಲ.**
- **ಪವನ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ, ಕರ್ನಾಟಕ ರಾಜ್ಯ, ದೇಶಕ್ಕೆ ಎರಡನೇ ಸ್ಥಾನದಲ್ಲಿದೆ – ಪ್ರಲ್ಹಾದ ಜೋಶಿ.**
- **'ವಯುಕ್ತಿಕ ಮತ್ತು ಸಮಾಜಕ್ಕಾಗಿ ಯೋಗ': ಹತ್ತು ದಿನಗಳ ಕಾಲ ನಡೆದ ಯೋಗೋತ್ಸವಕ್ಕೆ ಇಂದು ತೆರೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದಲ್ಲಿ ಸದ್ಯ ಒಟ್ಟು 946 ವಸತಿ ಶಾಲೆಗಳು, ಕಾರ್ಯನಿರ್ವಹಿಸುತ್ತಿದ್ದು, ಈ ಬಾರಿ ಹೊಸದಾಗಿ, 20 ವಸತಿ ಶಾಲೆಗಳಿಗೆ ಅನುಮತಿ ನೀಡಿದ್ದಾಗಿ, ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ವಸಂತನಗರದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಭವನದಲ್ಲಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು. ಬಾಗಲಕೋಟೆಯ ಅಂಕಿತಾ ಕೊಣ್ಣುರು, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625 ಪೂರ್ಣಾಂಕ ಗಳಿಸಿದ್ದನ್ನು, ವಿಶೇಷವಾಗಿ ಉಲ್ಲೇಖಿಸಿದ ಮುಖ್ಯಮಂತ್ರಿ, ಸಿದ್ಧರಾಮನ ಹುಂಡಿಯಲ್ಲಿ ನೇರವಾಗಿ ತಾವು 5ನೇ ತರಗತಿ ಸೇರಿದಾಗ, ತಮ್ಮ ಬದುಕನ್ನು ರೂಪಿಸುವಲ್ಲಿ, ರಾಜಪ್ಪ ಮೇಷ್ಟ್ರು ವಹಿಸಿದ ಪಾತ್ರವನ್ನು ವಿನೀತರಾಗಿ ಸ್ಮರಿಸಿದರು. ಶಿಕ್ಷಣ ಎಲ್ಲರ ಬದುಕಿನಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ, ಎಂದು ಮುಖ್ಯಮಂತ್ರಿ ಒತ್ತು ಕೊಟ್ಟು ಹೇಳಿದರು.**

<><><>

ರಾಜ್ಯದ ತುಮಕೂರು, ಶಿವಮೊಗ್ಗ, ಕಾರವಾರ ಹಾಗೂ ಮಂಡ್ಯದಲ್ಲಿ, ಕಿದ್ವಾಯಿ ಮಾದರಿ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಯನ್ನು ತೆರೆಯುವ ಚಿಂತನೆ ಇದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣಪ್ರಕಾಶ್ ಪಾಟೀಲ್ ಬೆಂಗಳೂರಿನಲ್ಲಿ, ತಿಳಿಸಿದ್ದಾರೆ. ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯನ್ನು, ಕಲಬುರಗಿಯಲ್ಲಿ ಪ್ರಾರಂಭಿಸುವ ಬಗ್ಗೆ, ಯೋಚಿಸಲಾಗುತ್ತಿದೆ. ರಾಜ್ಯದ ನಾನಾ ಭಾಗಗಳಿಂದ ಆರೋಗ್ಯಾಕಾಂಕ್ಷಿಗಳು ಬೆಂಗಳೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಸಕಾಲದಲ್ಲಿ ಎಲ್ಲರಿಗೂ ಉತ್ತಮವಾದ ಚಿಕಿತ್ಸೆ ಒದಗಿಸುವುದು ಕಷ್ಟಕರ. ಈ ಸಮಸ್ಯೆ ನಿವಾರಿಸಲು, ಸರ್ಕಾರ ಯೋಜನೆ ರೂಪಿಸುತ್ತಿದೆ ಎಂದು, ಸಚಿವರು ಮಾಹಿತಿ ನೀಡಿದ್ದಾರೆ.

<><><>

ರಾಜ್ಯದ ಚಾಮರಾಜನಗರ, ಮೈಸೂರು ಹಾಗೂ ಕೊಡಗು ಜಿಲ್ಲೆಗಳ ವನವಾಸಿಗರಲ್ಲಿ, 'ಸಿಕಲ್ ಸೆಲ್ ಎನಿಮಿಯಾ' ಎಂಬ, ಅನುವಂಶಿಕ ಕಾಯಿಲೆ ಪತ್ತೆಯಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯತ್ ಸಭಾ ಭವನದಲ್ಲಿ, ವಿಶ್ವ ಸಿಕಲ್ ಸೆಲ್ ಎನಿಮಿಯಾ ನಿರ್ಮೂಲನಾ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. 'ಸಿಕಲ್ ಸೆಲ್ ಎನಿಮಿಯಾ' ರೋಗದ ಪತ್ತೆ, ಜಾಗೃತಿ ಹಾಗೂ ಚಿಕಿತ್ಸೆ ನೀಡುವ ಉದ್ದೇಶದಿಂದ, 'ಪ್ರೊಜೆಕ್ಟ್ ಚಂದನ ಯೋಜನೆ'ಯನ್ನು, 2 ವರ್ಷಗಳ ಅವಧಿಗೆ ಜಾರಿಗೊಳಿಸಲಾಗುತ್ತಿದೆ. ಮುಂಬರುವ 2 ವರ್ಷಗಳಲ್ಲಿ 2 ಲಕ್ಷದ 56 ಸಾವಿರ ಜನರನ್ನು ಪರೀಕ್ಷೆಗೆ ಒಳಪಡಿಸಿ, ಸಿಕಲ್ ಸೆಲ್ ಎನಿಮಿಯಾ ರೋಗಿಗಳನ್ನು ಗುರುತಿಸಿ ಚಿಕಿತ್ಸೆ ನೀಡುವ ಗುರಿ ಹೊಂದಲಾಗಿದೆ ಎಂದು, ಸಚಿವ ದಿನೇಶ್ ನುಡಿದರು.

<><><>

ವಿಶ್ವ ಸಿಕಲ್ ಸೆಲ್ ಕಾಯಿಲೆ ಜಾಗೃತಿ ದಿನವನ್ನು, ಬುಧವಾರ ರಾಜ್ಯಾದ್ಯಂತ ಆಚರಿಸಿದ ವರದಿಗಳು ಬಂದಿವೆ. ದೇಹದ ಕೆಂಪು ರಕ್ತ ಕಣಗಳು ಶೀಘ್ರ ಅವಸಾನಗೊಳ್ಳುವ ಕಾಯಿಲೆಯನ್ನು ಸಿಕಲ್ ಸೆಲ್ ಎನಿಮಿಯಾ ಎಂದು ಕರೆಯಲಾಗುತ್ತದೆ.

<><><>

ಪಶ್ಚಿಮಘಟ್ಟದ ಔಷಧೀಯ ಗುಣವುಳ್ಳ ಹಣ್ಣು ಮುರುಗಲು, ಪುನರ್ಪುಳಿ ಅಥವಾ ಕೋಕಮ್. ಪ್ರಧಾನಮಂತ್ರಿ Formalisation of Micro Food Processing Enterprises scheme ಅಡಿ, ಉತ್ತರಕನ್ನಡ ಜಿಲ್ಲೆ ಸಿದ್ದಾಪುರ ಸಮೀಪದ, ಗುಂಜಗೋಡಿನ ವಿದೀಶ್ ಭಟ್ ಹಾಗೂ ರಶ್ಮಾ ಭಟ್ ದಂಪತಿ, ಕಳೆದ ಎರಡು ವರ್ಷಗಳಿಂದ, ಚಿಕ್ಕ, ಚೊಕ್ಕ, ಗುಣಮಟ್ಟದ ಶರಧಿ ಹೋಮ್ ಪ್ರೊಡಕ್ಟ್ಸ್ ಆರಂಭಿಸಿ, ಸುತ್ತಲಿನ ಹತ್ತಾರು ಜನಕ್ಕೆ ಉದ್ಯೋಗದಾತರೆನಿಸಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ರಶ್ಮಾ ವಿದೀಶ್ ಭಟ್ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಕೋಕಮ್ ಉದ್ಯಮಿ ರಶ್ಮಾ ಭಟ್ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

2023-24ನೇ ಸಾಲಿನಲ್ಲಿ, ಕರ್ನಾಟಕ ರಾಜ್ಯ, ಅಖಿಲ ಭಾರತ ಪವನ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ, ಎರಡನೇ ಸ್ಥಾನದಲ್ಲಿದೆ ಎಂದು, ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವ, ಪ್ರಲ್ಹಾದ ಜೋಶಿ, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ನವೀಕರಿಸಬಹುದಾದ ಇಂಧನ ಮತ್ತು ವಾಯು ಶಕ್ತಿಯ ಬಳಕೆಯ ಕಡೆಗೆ, ಈ ಸಾಧನೆ ಕರ್ನಾಟಕದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು, ಸಚಿವರು ಶ್ಲಾಘಿಸಿದ್ದಾರೆ.

<><><>

ಬೆಂಗಳೂರಿನ, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದಲ್ಲಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ, 'ಬಾಹ್ಯಾಕಾಶಕ್ಕಾಗಿ ಯೋಗ' ವಿಷಯ ಕುರಿತ, ವಿಚಾರ ಸಂಕಿರಣ, ಆಯೋಜಿಸಲಾಗಿತ್ತು. 'ವಯಕ್ತಿಕ ಮತ್ತು ಸಮಾಜಕ್ಕಾಗಿ ಯೋಗ' ಎಂಬ, ಪ್ರಸಕ್ತ ಸಾಲಿನ ಯೋಗ ದಿನಾಚರಣೆ ಧ್ಯೇಯ ಹಾಗೂ, ನಾಸಾ ದಿಂದ ಎಸ್ -ವ್ಯಾಸ ವರೆಗೆ, ನಡೆದು ಬಂದ ದಾರಿಯನ್ನು, ಎಸ್-ವ್ಯಾಸ ಸಂಸ್ಥಾಪಕ ಡಾಕ್ಟರ್ ಎಚ್.ಆರ್. ನಾಗೇಂದ್ರ ವಿವರಿಸಿದರು.

<><><>

ಧಾರವಾಡದ ಶ್ರೀ ಸಾಯಿ ಯೋಗ ಕೇಂದ್ರ, ಕಳೆದ 10 ವರ್ಷಗಳಿಂದ, 'ನಿತ್ಯ ಯೋಗ ಸ್ವಸ್ಥ ಆರೋಗ್ಯಕ್ಕಾಗಿ' ಎಂಬ ಧ್ಯೇಯದೊಂದಿಗೆ, ಮಹಿಳೆಯರಿಗಾಗಿ ಉಚಿತ ಯೋಗಾಭ್ಯಾಸ ನಡೆಸುತ್ತಿದೆ. ರಾಜ್ಯಾದ್ಯಂತ ನಡೆದ, 10 ದಿನಗಳ ಯೋಗೋತ್ಸವ ಇಂದು ಸಮಾರೋಪಗೊಳ್ಳಲಿರುವ ಹಿನ್ನಲೆ, ಧಾರವಾಡದ ಯೋಗ ಗುರು ಸುಮಲತಾ ಪ್ರಸಾದ ಹೊಂಗಲ್, ಪ್ರದೇಶ ಸಮಾಚಾರಕ್ಕಾಗಿ, ನಿತ್ಯ ಯೋಗದ ಮಹತ್ವವನ್ನು ತಿಳಿಸಿದ್ದಾರೆ.

<><><>

ಯೋಗಗುರು ಸುಮಲತಾ ಪ್ರಸಾದ್ ಧ್ವನಿ 40 ಸೆಕೆಂದುಗಳು

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಮತ್ತು ನಾಳೆ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಸಂಜೆ ತೋರಣಗಲ್ಲಿನ ಜಿಂದಾಲ್ ಟೌನ್ ಶಿಪ್‌ನಲ್ಲಿ ನಡೆಯುವ, 2024ರ 'ಯೋಗರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ. ನಾಳೆ, 21 ರಂದು ಜಿಂದಾಲ್ ಟೌನ್‌ಶಿಪ್ ನಲ್ಲಿ ವಿಶ್ವ ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ. ಬಳಿಕ ಹೊಸಪೇಟೆಗೆ ತೆರಳಿ, ವಿಜಯನಗರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.

<><><>

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾಗಿ, ಸಾವಿರಾರು ಕಿವುಡ ಮತ್ತು ಮೂಕ ಮಕ್ಕಳ ಅಭಿವ್ಯಕ್ತಿಗೆ, ಧ್ವನಿಯಾಗಿದ್ದ, ಹಿರಿಯ ರಂಗ ಕರ್ಮಿ, ಆಕಾಶವಾಣಿ ನಾಟಕಕಾರ, ಡಾಕ್ಟರ್ ನಟೇಶ ರತ್ನ ಅವರ ದೇಹವನ್ನು, ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯಕ್ಕೆ ದಾನ ಮಾಡಲಾಗಿದೆ. ಮೈಸೂರಿನಲ್ಲಿ 'ಸರಸ್ವತಿಪುರಂನ ಮಧ್ಯದ ತೆಂಗಿನ ತೋಪು', 'ಸಮತೆಂತೊ', ರಂಗ ತಂಡ ಕಟ್ಟಿ, ನಿರಂತರವಾಗಿ 50 ವರ್ಷಗಳ ವರೆಗೆ ನಡೆಸಿಕೊಂಡು ಬಂದ ನ.ರತ್ನ, ಬೆಂಗಳೂರಿನಲ್ಲಿ ಹೃದಯಾಘಾತದಿಂದ ಬುಧವಾರ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ನ. ರತ್ನ ಅವರ 'ಶಾಂತಿ ಕುಟೀರ' ನಾಟಕ, ಈತ್ತೀಚೆಗೆ ಮೈಸೂರಿನಲ್ಲಿ ಪ್ರದರ್ಶನಗೊಂಡಿತ್ತು. ನಟ ಮತ್ತು ಮಾತು ಅವರ ಹೆಸರಾಂತ ಕೃತಿ. ಮುಖ್ಯಮಂತ್ರಿ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಶಿವಮೊಗ್ಗದ ಖ್ಯಾತ ಪರಿಸರವಾದಿ ಬಿ.ವೆಂಕಟಗಿರಿ ರಾವ್, ಬುಧವಾರ ಶಿವಮೊಗ್ಗದಲ್ಲಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ನಡೆದಾಡುವ ಸಸ್ಯ ವಿಶ್ವಕೋಶ ಎಂದು ರಾಜ್ಯಾದ್ಯಂತ ಅವರು ಪ್ರಸಿದ್ಧರಾಗಿದ್ದರು. ಅನೇಕ ಪರಿಸರ ಪುರಸ್ಕಾರಗಳಿಗೆ ಭಾಜನರಾಗಿದ್ದ ಅವರು, ನಕ್ಷತ್ರವನ, ಸಾಮಾಜಿಕ ಅರಣ್ಯೀಕರಣ ಹಾಗೂ ಅರಣ್ಯ ಕಾನೂನುಗಳಿಗೆ ಸಂಬಂಧಿಸಿ, ವಿಶೇಷ ಪರಿಣತಿ ಹೊಂದಿದ್ದರು.

<><><>

ಭದ್ರಾ ನದಿಯ ಹಿನ್ನೀರಿನಲ್ಲಿ ತೆಪ್ಪ ಮುಳುಗಿ, ಮೂವರು ನಾಪತ್ತೆಯಾಗಿರುವ ಘಟನೆ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕು ಬೈರಾಪುರ ಗ್ರಾಮದ ಬಳಿ ನಡೆದಿದೆ. ನಾಪತ್ತೆಯಾದವರಿಗಾಗಿ ಶೋಧಕಾರ್ಯ ಮುಂದುವರೆದಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ವಾಲ್ಮಿಯ, 39ನೇ ಸಂಸ್ಥಾಪನಾ ದಿನಾಚರಣೆ, ಇಂದು ಬೆಳಗ್ಗೆ 11 ಗಂಟೆಗೆ, ವಾಲ್ಮಿ ಸಭಾಂಗಣದಲ್ಲಿ ನಡೆಯಲಿದೆ. ರಾಷ್ಟ್ರೀಯ ಜಲ ಅಕಾದೆಮಿ ನಿರ್ದೇಶಕ ಮಿಲಿಂದ ಪಾನಪಾಟೀಲ, ಪಾಲ್ಗೊಳ್ಳುವರು.

<><><>

ಯುವ ನಿಧಿ ಯೋಜನೆಯ ಫಲಾನುಭವಿಗಳ ಬ್ಯಾಂಕ್ ಖಾತೆಗೆ, ನೇರವಾಗಿ ಹಣ ಸಂದಾಯ ಮಾಡಲಾಗುತ್ತಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲೂಕಿನಲ್ಲಿ, ಡಂಘಿ ಜ್ವರದ ಲಕ್ಷಣಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದ ಹಿನ್ನೆಲೆ, ಶಾಸಕ ಬಿ.ವೈ. ವಿಜಯೇಂದ್ರ, ಸಭೆ ನಡೆಸಿದರು.

<><><>

ಚಿಕ್ಕಮಗಳೂರು ಜಿಲ್ಲೆಯಲ್ಲಿ, ಡೆಂಘೀ ಜ್ವರ ಏರುಗತಿಯಲ್ಲಿರುವ ಕಾರಣ, ಇಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದಲ್ಲಿ ಹೊಸದಾಗಿ, 20 ವಸತಿ ಶಾಲೆಗಳ ಸ್ಥಾಪನೆಗೆ ಅನುಮತಿ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ತುಮಕೂರು, ಶಿವಮೊಗ್ಗ, ಕಾರವಾರ ಹಾಗೂ ಮಂಡ್ಯದಲ್ಲಿ, ಕಿದ್ವಾಯಿ ಮಾದರಿ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆ – ಶರಣಪ್ರಕಾಶ್ ಪಾಟೀಲ.

- ಪವನ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ, ಕರ್ನಾಟಕ ರಾಜ್ಯ ದೇಶಕ್ಕೆ ಎರಡನೇ ಸ್ಥಾನದಲ್ಲಿದೆ – ಪ್ರಲ್ಹಾದ ಜೋಶಿ.
- 'ವಯಕ್ತಿಕ ಮತ್ತು ಸಮಾಜಕ್ಕಾಗಿ ಯೋಗ'; ಹತ್ತು ದಿನಗಳ ಕಾಲ ನಡೆದ ಯೋಗೋತ್ಸವಕ್ಕೆ ಇಂದು ತೆರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ